**ಪಾಠ–6** **ಆಗಸ್ಟ್ 3–9**

# ಸೃಷ್ಟಿ ಕರ್ತನನ್ನು ಆರಾಧಿಸು



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : ಕೀರ್ತನೆಗಳು 115:1–8, ಧರ್ಮೋಪದೇಶಕಾಂಡ 10:17–22, ಕೀರ್ತನೆಗಳು 10:1, ಯೆಶಾಯ 1:10–17, ಯೆಶಾಯ 58, ಮಾರ್ಕ 12:38–40.

**ಸ್ಮರಣವಾಕ್ಯ : "ನೋಡಿರಿ, ಕೇಡಿನ ಬಂಧಗಳನ್ನು ಬಿಚ್ಚುವದು, ನೊಗದ ಕಣ್ಣಿಗಳನ್ನು ಕಳಚುವದು, ಜಜ್ಜಿ ಹೋದವರನ್ನು ಬಿಡುಗಡೆ ಮಾಡುವದು, ನೊಗಗಳನ್ನೆಲ್ಲಾ ಮುರಿಯುವದು, ಹಸಿದವರಿಗೆ ಅನ್ನವನ್ನು ಹಂಚುವದು, ಅಲೆಯುತ್ತಿರುವ ಬಡವರನ್ನು ಮನೆಗೆ ಬರಮಾಡಿಕೊಳ್ಳುವದು, ಬೆತ್ತಲೆಯವರನ್ನು ಕಂಡಾಗೆಲ್ಲಾ ಅವರಿಗೆ ಹೊದಿಸುವದು, ನಿನ್ನಂತೆ ನರನಾಗಿರುವ ಯಾವನಿಗೇ ಆಗಲಿ ಮುಖ ತಪ್ಪಿಸಿಕೊಳ್ಳದಿರುವದು, ಇವುಗಳೇ ನನಗೆ ಇಷ್ಟವಾದ ಉಪವಾಸ ವ್ರತವಲ್ಲವೇ? (ಯೆಶಾಯ 58:6,7).**

ಹಳೆಯ ಒಡಂಬಡಿಕೆ ಪ್ರವಾದಿಗಳ ಬಗ್ಗೆ ಶೀಘ್ರವಾಗಿ ಓದುವುದು. ಬಡವರ ಮತ್ತು ತುಳಿತಕ್ಕೊಳಗಾದವರನ್ನು ಕೀಳಾಗಿ ಕಾಣುವ ಬಗ್ಗೆ ಅವರು ನಮ್ಮನ್ನು ಎಚ್ಚರಿಸುತ್ತಾರೆ. ಪ್ರವಾದಿಗಳು ಮತ್ತು ದೇವರು ಯಾರಿಗೋಸ್ಕರ ಮಾತನಾಡಿದರೋ ಅವರು ತಮ್ಮ ಸುತ್ತಮುತ್ತಲಿನ ಎಲ್ಲಾ ರಾಷ್ಟ್ರಗಳಲ್ಲಿ ಏನು ಮಾಡಲಾಗಿದೆ ಎಂಬುದನ್ನು ನೋಡಿದ ಬಗ್ಗೆ ಆಕ್ರೋಶಗೊಂಡಿದ್ದರು (ಉದಾಹರಣೆ, ಆಮೋಸ 1 ಮತ್ತು 2 ನೋಡಿ). ಆದರೆ ಅವರು ಅನೇಕ ದೈವೀಕ ಆಶೀರ್ವಾದಗಳನು ಸ್ವೀಕರಿಸಿದ ಸ್ವಂತ ದೇವಜನರಿಂದ ಆದ ಅನ್ಯಾಯದ ಕೃತ್ಯಗಳ ಬಗ್ಗೆಯೂ ಸಹ ಒಂದು ನಿರ್ದಿಷ್ಟವಾದ ದುಃಖ ಮತ್ತು ಕೋಪದ ಭಾವನೆಯನ್ನು

ಹೊಂದಿದ್ದರು. ಅವರು ದೇವರು ಕೊಟ್ಟ ಆಜ್ಞೆಗಳ ಜೊತೆಗೆ ಇತಿಹಾಸವನ್ನು ಸಹ ಈ ಜನರು ಚೆನ್ನಾಗಿಯೇ ತಿಳಿದಿರಬೇಕು. ದುರದೃಷ್ಟವಶಾತ್, ಅದು ಯಾವಾಗಲೂ ನಿದರ್ಶನವಲ್ಲ ಮತ್ತು ಈ ದುಃಖದ ಘಟನೆಗಳ ಸ್ಥಿತಿಯನ್ನು ಹೇಳಲು ಪ್ರವಾದಿಗಳಿಗೆ ಸಾಕಷ್ಟು ಇತ್ತು.

ಹಳೆಯ ಒಡಂಬಡಿಕೆ ಪ್ರವಾದಿಗಳಿಂದ ನ್ಯಾಯ ಮತ್ತು ಅನ್ಯಾಯಕ್ಕೆ ಸಂಬಂಧಿಸಿದ ಅನೇಕ ಪ್ರಸಿದ್ಧವಾದ ಹೇಳಿಕೆಗಳು ವಾಸ್ತವವಾಗಿ ಆರಾಧನೆ ಬಗ್ಗೆ ಸಲಹೆಗಳ ಅರ್ಥದಲ್ಲಿ ನೀಡಲಾಗಿದೆ ಎಂದು ಕಂಡು ಹಿಡಿಯುವುದಕ್ಕೆ ಆಸಕ್ತಿದಾಯಕವಾಗಿದೆ. ನಾವು ನೋಡುವಂತೆ, ನಿಜವಾದ ಆರಾಧನೆಯು ಧಾರ್ಮಿಕ ಆಚರಣೆಯ ಸಮಯದಲ್ಲಿ ಸಂಭವಿಸುವ ಯಾವುದೋ ಒಂದಲ್ಲ. ಇತರರ ಯೋಗಕ್ಷೇಮಕ್ಕಾಗಿ ದೇವರ ಕಾಳಜಿಯನ್ನು ಹಂಚಿಕೊಳ್ಳುವುದಕ್ಕೆ ಬದುಕುತ್ತಿರುವ ಜೀವನ ಮತ್ತು ಮರೆತುಹೋದವರ ಹಾಗೂ ದೌರ್ಜನ್ಯಕ್ಕೆ ಒಳಗಾದವರನ್ನು ಹುಡುಕಿ ಮೇಲೆತ್ತುವದು ಕೂಡಾ ಸತ್ಯ ಆರಾಧನೆಯಾಗಿದೆ.

**ಭಾನುವಾರ** **ಆಗಸ್ಟ್ 4**

## ವಿಗ್ರಹಾರಾಧನೆ ಮತ್ತು ದಬ್ಬಾಳಿಕೆ

ದೇವರು ಇಸ್ರಾಯೇಲ್ ಜನರನ್ನು ಐಗುಪ್ತ ದೇಶದಿಂದ ಕರೆದೊಯ್ಯದ ಕೂಡಲೇ, ಆತನು ಅವರನ್ನು ಸೀನಾಯಿ ಬೆಟ್ಟದಲ್ಲಿ ಭೇಟಿಯಾದನು. ಅವರಿಗೆ ದಶಾಜ್ಞೆಗಳನ್ನು ಲಿಖಿತ ರೂಪದಲ್ಲಿ ನೀಡಿದನು. ಇತರ ದೇವರುಗಳನ್ನು ಪೂಜಿಸಬಾರದು ಮತ್ತು ಮೂರ್ತಿಗಳನ್ನು ಮಾಡಿಕೊಳ್ಳಬಾರದು ಎಂಬುದರ ಬಗ್ಗೆ ಮೊದಲ ಎರಡು ಆಜ್ಞೆಗಳಲ್ಲಿ ಕೊಡಲಾಗಿದೆ (ವಿಮೋಚನಕಾಂಡ 20:2–6 ನೋಡಿ). ಪ್ರತಿಕ್ರಿಯೆಯಾಗಿ, ಜನರು ಅವರಿಗಾಗಿ ಆಜ್ಞಾಪಿಸಿದೆಲ್ಲವನ್ನೂ ಮತ್ತು ಆತನ ಜನರಾಗಿ ಬದುಕಲು ಆಜ್ಞಾಪಿಸುವೆಲ್ಲವನ್ನು ಮಾಡಿದರು (ವಿಮೋಚನಕಾಂಡ 24:1–13).

ಆದರೆ ಮೋಶೆಯು ಸುಮಾರು ಆರು ವಾರಗಳ ಕಾಲ ಪರ್ವತದ ಮೇಲೆ ಹೋದನು ಮತ್ತು ಆತನಿಗೆ ಏನಾಯಿತೆಂದು ಜನರು ಆಶ್ಚರ್ಯಪಡಲು ಪ್ರಾರಂಭಿಸಿದರು. ಜನಸಮೂಹದ ಒತ್ತಾಯದ ಮೇರೆಗೆ ಆರೋನನು ಚಿನ್ನದ

ಬಸವನನ್ನು ಮಾಡಿದನು ಮತ್ತು ಅದರ ಮುಂದೆ ಜನರ ಯಜ್ಞಗಳನ್ನು ಸಮರ್ಪಿಸುವುದಕ್ಕೆ ಮುನ್ನಡೆಸಿದನು, ಬಳಿಕ "ಜನರು ಉಣ್ಣುವುದಕ್ಕೂ ಕುಡಿಯುವುದಕ್ಕೂ ಕೂತುಕೊಂಡರು; ಆಮೇಲೆ ಎದ್ದು ಕುಣಿದಾಡಿದರು" (ವಿಮೋಚನಕಾಂಡ 32:6). ಜನರು ಎಷ್ಟು ಬೇಗನೆ ದೇವರ ಕಡೆಯಿಂದ ವಿಗ್ರಹಾರಾಧನೆಯ ಕಡೆಗೆ ಮರಳಿದರು ಎಂಬುದನ್ನು ತಿಳಿದು ಯೆಹೋವನು ಮತ್ತು ಮೋಶೆಯರಿಬ್ಬರೂ ಅಸಮಾಧಾನ ವ್ಯಕ್ತಪಡಿಸಿದರು. ಅರ್ಹ ಶಿಕ್ಷೆಯಿಂದ ಇಸ್ರಾಯೇಲ್ಯರನ್ನು ರಕ್ಷಿಸಿದ್ದು ಮೋಶೆಯ ಮಧ್ಯಸ್ಥಿಕೆಯೇ ಎಂದು ಕಾಣುತ್ತದೆ (ವಿಮೋಚನಕಾಂಡ 32:30–34 ನೋಡಿ).

ಹೇಗೆ ಆದರೂ, ದೇವರ ಜನರು ವಿಗ್ರಹಾರಾಧನೆ ಎಂಬ ಶೋಧನೆಗೆ ಪದೇ ಪದೇ ಬಿದ್ದುಹೋಗುತ್ತಿದ್ದರು. ಇಸ್ರಾಯೇಲ್ ಮತ್ತು ಯೆಹೂದರ ಅರಸರ ಇತಿಹಾಸವು ವಿಗ್ರಹಾರಾಧನೆಯಿಂದ ಸ್ಥಗಿತಗೊಂಡು, ಇದರಲ್ಲಿ ಕೆಲವು ಅರಸರ ಅತಿರೇಕ ಕಾರ್ಯಗಳು ತಮ್ಮ ಜನರನ್ನು ಆ ದೇವತೆಗಳ ಆರಾಧನೆಯಲ್ಲಿ ತೊಡಗಿಸಿಕೊಳ್ಳುವಂತೆ ದಾರಿ ಮಾಡಿಕೊಟ್ಟರು. ಅಂತಹ ವಿಶ್ವಾಸ ದ್ರೋಹವು ಪ್ರವಾದಿಗಳ ಪುನರಾವರ್ತಿತ ಗಮನವಾಗಿತ್ತು, ದೇವರು ಜನರನ್ನು ತನ್ನ ಕಡೆಗೆ ಹಿಂತಿರುಗಿ ಬರಲು ಅವರನ್ನು ಕರೆಯುವುದಕ್ಕೆ ಕಳುಹಿಸಿದನು. ಹೆಚ್ಚಾಗಿ, ಪುನರುಜ್ಜೀವನ ಮತ್ತು ಸುಧಾರಣೆಗಾಗಿ ಕರೆಯುವ ಮಧ್ಯೆ, ಅವರ ನಡುವೆ ಇರುವ ಬಡವರು, ನಿರ್ಗತಿಕರು ಮತು ಅಸಹಾಯಕರನ್ನು ಉತ್ತಮವಾಗಿ ಉಪಚರಿಸುವುದಕ್ಕಾಗಿ ಕರೆಯಲಾಗಿತ್ತು.

**ಕೀರ್ತನೆಗಳು 115:1–8 ಓದಿ. ಅಲ್ಲಿ ಲೇಖಕರು ಯಾವ ನಿರ್ಣಾಯಕ ಅಂಶವನ್ನು ಮಾಡುತ್ತಿದ್ದಾನೆ?**

ನಾವು ಆರಾಧಿಸುವ ಮತ್ತು ಗಮನವಿಡುವ ವಸ್ತುಗಳು ಅಥವಾ ವ್ಯಕ್ತಿಗಳಂತೆ ಆಗುವದು ಮಾನವನ ಪ್ರವೃತ್ತಿಯಾಗಿದೆ. ಆದ್ದರಿಂದ, ದೇವರ ಜನರು ನ್ಯಾಯಾಧಿಪತಿಯಾದ ದೇವರನ್ನು ಪೂಜಿಸುವುದರಿಂದ ಸುತ್ತಮುತ್ತಲಿನ ರಾಜ್ಯಗಳು ಯುದ್ಧ ಮತ್ತು ಫಲವತ್ತತೆಯ ಶೈಲಿಯಲ್ಲಿದ್ದ ಸುಳ್ಳು ದೇವತೆಗಳನ್ನು ಪೂಜಿಸುವ ಕಡೆಗೆ ತಿರುಗಿಕೊಳ್ಳುವುದು ಇತರರಿಗೂ ಮತ್ತು ನ್ಯಾಯಕ್ಕೂ ಸಂಬಂಧಿಸಿದಂತೆ

ಸ್ವಾಭಾವಿಕವಾಗಿ ಕಡಿಮೆಯಾಗುತ್ತದೆ. ಅವರು ಇತರ ದೇವರುಗಳನ್ನು ಆಯ್ಕೆ ಮಾಡಿಕೊಂಡಾಗ, ಜನರು ಬಹಳಷ್ಟು ವಿಷಯಗಳಲ್ಲಿ ತಮ್ಮ ನಡವಳಿಕೆಯನ್ನು ಬದಲಾಯಿಸಿಕೊಂಡರು, ಇತರರನ್ನು ಹೇಗೆ ಉಪಚರಿಸುತ್ತಾರೆ ಎಂಬುದು ಸಹ ಒಳಗೊಂಡಿತ್ತು. ಅವರು ಯೆಹೋವನಿಗೆ ನಂಬಿಗಸ್ತರಾಗಿದ್ದರೇ, ಅವರ ಮಧ್ಯದಲ್ಲಿದ್ದ ನಿರ್ಗತಿಕರಿಗಾಗಿ ಆತನ ಕಾಳಜಿಯನ್ನು ಅವರು ಹಂಚಿಕೊಳ್ಳುತ್ತಿದ್ದರು.

**ಯಾವುದನ್ನು ಪೂಜಿಸುತ್ತೇವೆಯೋ ಅದರಂತೆ ಆಗುತ್ತೇವೆ ಎಂಬ ಆಲೋಚನೆಯ ಬಗ್ಗೆ ಹೆಚ್ಚು ಜಾಗರೂಕರಾಗಿರಿ. ನಾವು ಈ ಸಮಕಾಲೀನ ತತ್ವದ ಸ್ಪಷ್ಟಪಡಿಸುವಿಕೆಯನ್ನು ಹೇಗೆ ಕಾಣುತ್ತೇವೆ?**

**ಸೋಮವಾರ** **ಆಗಸ್ಟ್ 5**

## ಆರಾಧಿಸಲು ಒಂದು ಕಾರಣ

ಸತ್ಯವೇದದ ಉದ್ದಕ್ಕೂ, ದೇವರ ಜನರು ದೇವರನ್ನು ಆರಾಧಿಸಲು ಒತ್ತಾಯಿಸಲ್ಪಟ್ಟಿದ್ದಾರೆ, ಆದರೆ ನಾವು ಹಾಗೆ ಮಾಡುವುದಕ್ಕೆ ಪುನರಾವರ್ತಿತ ಕಾರಣಗಳನ್ನು ನೀಡುತ್ತೇವೆ. ಆತನು ಯಾರು ಆತನು ಏನು ಮಾಡಿದ್ದಾನೆ, ಮತ್ತು ಆತನ ಅನೇಕ ಗುಣಲಕ್ಷಣಗಳ ಕಾರಣದಿಂದ ಆತನನ್ನು ಆರಾಧಿಸುವಂತೆ ನಮಗೆ ಹೇಳಲಾಗಿದೆ. ಇವುಗಳ ನಡುವೆ ಆತನ ಒಳ್ಳೆಯತನ, ನ್ಯಾಯ ಮತ್ತು ಕರುಣೆಯಿದೆ. ನಮಗೆ ದೇವರು ಹೇಗೆ ಇದ್ದಾರೆಂದು ನೆನಪಿಸುವಾಗ, ಆತನು ನಮಗೋಸ್ಕರ ಏನು ಮಾಡಿದ್ದಾನೆ (ವಿಶೇಷವಾಗಿ ಕ್ರಿಸ್ತನು ಶಿಲುಬೆಯಲ್ಲಿ) ಮತ್ತು ಏನು ಮಾಡಲು ಭರವಸೆ ನೀಡಿದ್ದಾನೆ, ದೇವರನ್ನು ಸ್ತುತಿಸಲು ಮತ್ತು ಆರಾಧಿಸುವುದಕ್ಕೆ ಎಂದಿಗೂ ನಮಗೆ ಕಾರಣವೇ ಇಲ್ಲವೆಂದು ಆಗಿರಬಾರದು.

**ಧರ್ಮೋಪದೇಶಕಾಂಡ 10:17–22, ಕೀರ್ತನೆ 101:1, 146:5–10, ಯೆಶಾಯ 5:16, 61:11 ಓದಿರಿ. ದೇವರನ್ನು ಸ್ತುತಿಸುವುದಕ್ಕೂ ಮತ್ತು ಆರಾಧಿಸುವುದಕ್ಕೂ ಈ ವಚನಗಳಲ್ಲಿ ಕೊಡಲ್ಪಟ್ಟ ಪ್ರೇರಣೆಗಳು ಯಾವುವು?**

ಆರಾಧನೆಗಾಗಿ ದೇವರ ಜನರಿಗೆ ಇಂತಹ ಕಾರಣಗಳು ಹೊಸದೇನಾಗಿರಲಿಲ್ಲ. ಹೊಸದಾಗಿ ಬಿಡುಗಡೆಯಾದ ಇಸ್ರಾಯೇಲ್ಯರ ಆರಾಧನೆಯ ಅತಿಹೆಚ್ಚಾದ ಉತ್ಸಾಹಭರಿತ ಸಮಯಗಳು ಅವರ ಪರವಾಗಿ ದೇವರ ಸ್ಪಷ್ಟವಾದ ಮಧ್ಯಸ್ಥಿಕೆಯ

ಪ್ರತಿಕ್ರಿಯೆಯಾಗಿ ಸಂಭವಿಸಿದವು. ಉದಾಹರಣೆಗೆ, ಐಗುಪ್ತ ದೇಶದಿಂದ ಹೊರಗೆ ಬಂದ ನಂತರ ಮತ್ತು ಕೆಲವು ಸಮುದ್ರವನ್ನು ದಾಟಿದ ನಂತರ, ಅವರು ಈಗ ಏನು ನೋಡಿದರೂ ಮತ್ತು ಯಾವುದರಿಂದ ರಕ್ಷಿಸಲ್ಪಟ್ಟರೋ ಅದಕ್ಕಾಗಿ ಮೋಶೆ ಹಾಗೂ ಮಿರ್ಯಾಮಳು ಜನರನ್ನು ದೇವರಿಗೆ ಸ್ತುತಿಗೀತೆಯನ್ನು ಹಾಡುವುದಕ್ಕೆ ಮುನ್ನಡೆಸಿದರು (ವಿಮೋಚನಕಾಂಡ 15, ನೋಡಿ).

ಇಂತಹ ಘಟನೆಗಳಲ್ಲಿ ಬಹಿರಂಗವಾದಂತಹ ದೇವರ ನ್ಯಾಯ ಮತ್ತು ಕರುಣೆ ಮರೆತುಹೋಗಲಿಲ್ಲ. ಜನರು ಈ ಕಥೆಗಳನ್ನು ನಿಯಮಿತವಾಗಿ ಪುನಃ ಹೇಳುವ ಮೂಲಕ ಜೀವಂತವಾಗಿ ಇಟ್ಟುಕೊಂಡಿದ್ದರಿಂದಾಗಿ, ದೇವರ ಕೃತ್ಯಗಳು ಮತ್ತು ನ್ಯಾಯವು ಅವರ ಆರಾಧನೆಯ ವರ್ಷಗಳ ನಂತರ ಮತ್ತು ಮುಂದಿನ ಪೀಳಿಗೆಗೆ ಸ್ಫೂರ್ತಿಯಾಗಿ ಮುಂದುವರೆದಿದೆ. ಪುನಃ ಹೇಳುವ ಮತ್ತು ಆರಾಧನೆಯ ಒಂದು ಉದಾಹರಣೆ ಧರ್ಮೋಪದೇಶಕಾಂಡ 10:17–22ರಲ್ಲಿ ದಾಖಲಿಸಲಾಗಿದೆ.

ಮೊದಲನೆಯದಾಗಿ, ದೇವರ ನ್ಯಾಯ, ಆತನು ಯಾರು ಎಂಬುದು ಸಾಮಾನ್ಯಭಾಗವಾಗಿದೆ, ಆತನ ಅಗತ್ಯ ಪಾತ್ರವು ಪ್ರಮುಖ ಅಂಗವಾಗಿದೆ "ಹೌದು ದೇವರು ಕೆಟ್ಟದ್ದನ್ನು ನಡಿಸುವದೇ ಇಲ್ಲ ಸರ್ವಶಕ್ತನು ನೀತಿಯನ್ನು ಡೊಂಕು ಮಾಡುವುದೇ ಇಲ್ಲ" (ಯೋಬ 34:12). ದೇವರು ನ್ಯಾಯವಂತನು ನ್ಯಾಯದ ಬಗ್ಗೆ ಕಾಳಜಿ ವಹಿಸುತ್ತಾನೆ ಮತ್ತು ಆತನನ್ನು ಹೊಗಳುವುದಕ್ಕೆ ಮತ್ತು ಆರಾಧಿಸುವುದಕ್ಕೆ ಅದು ಒಂದು ಕಾರಣವಾಗಿದೆ.

ಎರಡನೆಯದಾಗಿ, ದೇವರು ನ್ಯಾಯವನ್ನು ಆತನ ಜನರ ಪರವಾಗಿ ಮತ್ತು ಬಡವರ ಹಾಗೂ ತುಳಿತಕ್ಕೊಳಗಾದವರೆಲ್ಲರ ಪರವಾಗಿ ಆತನ ನ್ಯಾಯ ಮತ್ತು ನ್ಯಾಯ ಕಾರ್ಯಗಳಲ್ಲಿ ಕಾಣಲಾಗುತ್ತದೆ. ಅವನ ನ್ಯಾಯವು ಕೇವಲ ಆತನ ಗುಣವನ್ನು ಮಾತ್ರ ವಿವರಿಸುವುದಿಲ್ಲ, ಬದಲಿಗೆ, ದೇವರು "ದಿಕ್ಕಿಲ್ಲದವರ ಮೊರೆಯನ್ನು ಆಲೈಸುತ್ತಾನೆ" (ಯೋಬ 34:28) ಎಂದು ಸತ್ಯವೇದವು ಚಿತ್ರಿಸುತ್ತದೆ ಮತ್ತು ನಮ್ಮ ಜಗತ್ತಿನಲ್ಲಿ ಸ್ಪಷ್ಟವಾದ ತಪ್ಪುಗಳ ಬಗ್ಗೆ ಸಕ್ರಿಯವಾಗಿದ್ದಾನೆ ಮತ್ತು ಆಸಕ್ತಿ ಹೊಂದಿದ್ದಾನೆ ಎಂದು ತೋರಿಸುತ್ತದೆ. ಅಂತಿಮವಾಗಿ, ಇದು ದೇವರ ಕೊನೆಯ ನ್ಯಾಯತೀರ್ಪಿನಲ್ಲಿ ಮತ್ತು ಆತನ ಪ್ರಪಂಚವನ್ನು ಮರುಸೃಷ್ಟಿ ಮಾಡುವದರಲ್ಲಿ ಸಂಪೂರ್ಣ ಅರಿವು ಆಗುತ್ತದೆ.

**ಕರ್ತನನ್ನು ಸ್ತುತಿಸುವುದಕ್ಕೆ ಪ್ರಾಚೀನ ಇಸ್ರಾಯೇಲ್ಯರಿಗೆ ಕಾರಣವಿದ್ದರೆ, ಶಿಲುಬೆಯ ನಂತರ ಆತನನ್ನು ಸ್ತುತಿಸುವುದಕ್ಕೆ ನಮಗೆ ಇನ್ನೆಷ್ಟು ಕಾರಣಗಳು ಇರುತ್ತವೆ?**

**ಮಂಗಳವಾರ** **ಆಗಸ್ಟ್ 6**

## ಧಾರ್ಮಿಕ ದಬ್ಬಾಳಿಕೆಗಾರರು

ಇಸ್ರಾಯೇಲ್ ಮತ್ತು ಯೆಹೂದ ಸಾಮ್ರಾಜ್ಯಗಳ ಉತ್ತಮಕಾಲಗಳಲ್ಲಿ ಜನರು ದೇವಸ್ಥಾನಕ್ಕೆ ಮತ್ತು ದೇವರ ಆರಾಧನೆಗೆ ಹಿಂತಿರುಗುತ್ತಿದ್ದಾಗ್ಯೂ ಕೂಡಾ ಅವರ ಆರಾಧನೆಯು ಅನೇಕ ವೇಳೆ ಸುತ್ತಮುತ್ತಲಿನ ರಾಷ್ಟ್ರಗಳ ಧರ್ಮಗಳ ಮತ್ತು ವಿಗ್ರಹಾರಾಧನೆಯಿಂದ ಅತಿಕ್ರಮಿಸುವದರೊಂದಿಗೆ ಮಿಶ್ರಿತವಾಗಿತ್ತು. ಆದರೆ ಪ್ರವಾದಿಗಳ ಪ್ರಕಾರ, ಅವರ ದೈನಂದಿನ ಜೀವನದಲ್ಲಿ ಭೂಮಿಯಲ್ಲಿ ನಡೆದ ದುಷ್ಟತನಗಳಿಂದ ಅವರನ್ನು ತಿರುಗಿಸಲು ಧರ್ಮದಲ್ಲಿನ ಅವರ ಅತ್ಯುತ್ತಮ ಪ್ರಯತ್ನಗಳು ಕೂಡಾ ಸಾಕಾಗಲಿಲ್ಲ ಮತ್ತು ಅವರ ಆರಾಧನೆಯ ಧಾರ್ಮಿಕ ಆಚರಣೆಗಳ ಮೂಲಕ ಆಧ್ಯಾತ್ಮಿಕರಾಗಲು ಎಷ್ಟೇ ಕಠಿಣವಾಗಿ ಶ್ರಮಿಸುತ್ತಿದ್ದರು, ಅವರ ಸ್ತೋತ್ರ ಗೀತೆಗಳ ಸಂಗಿತದೊಂದಿಗೆ ಬಡವರ ಮತ್ತು ತುಳಿತಕ್ಕೊಳಗಾದವರ ಅಳುವು ಕೊಚ್ಚಿಕೊಂಡು ಹೋಗಲಿಲ್ಲ.

ಆಮೋಸನು ತನ್ನ ದಿನದ ಜನರನ್ನು "ದಿಕ್ಕಿಲ್ಲದವರನ್ನು ತುಳಿದು ಮತ್ತು ಭೂಮಿಯ ಬಡವರೊಂದಿಗೆ ಬಿಟ್ಟು ಬಿಡು" (ಆಮೋಸ 8:4) ವಂತಹವರು. ಅವನು ಅವರ ಧಾರ್ಮಿಕ ಆಚರಣೆಯೊಂದಿಗೆ ತಮ್ಮ ಬಯಕೆಯನ್ನು ಪೂರ್ಣಗೊಳಿಸುವುದನ್ನು ಕಂಡನು. ಆದ್ದರಿಂದ ಅವರು ಮಾರುಕಟ್ಟೆಯನ್ನು ಪುನಃ ತೆರೆಯಲು ಮತ್ತು ಅವರ ಅಪ್ರಾಮಾಣಿಕ ವ್ಯಾಪಾರಕ್ಕೆ ಹಿಂತಿರುಗಿ "ಬಡವನನ್ನು ಬೆಳ್ಳಿಗೆ, ದಿಕ್ಕಿಲ್ಲದವನನ್ನು ಜೊತೆ ಕೆರಕ್ಕೆ ಕೊಂಡುಕೊಳ್ಳೋಣ" (ಆಮೋಸ 8:6) ಅಂದುಕೊಂಡರು.

**ಯೆಶಾಯ 1:10–17, ಆಮೋಸ 5:21–24 ಮತ್ತು ಮೀಕ 6:6–8 ಓದಿ. ಕರ್ತನು ಈ ಧಾರ್ಮಿಕ ಜನರಿಗೆ ಅವರ ಧಾರ್ಮಿಕ ಆಚರಣೆಗಳ ಕುರಿತು ಏನು ಹೇಳುತ್ತಿದ್ದಾನೆ?**

ಆತನ ಪ್ರವಾದಿಗಳ ಮೂಲಕ, ಧರ್ಮ ಮತ್ತು ಆರಾಧನೆಯನ್ನು ಅಪಹಾಸ್ಯ ಮಾಡಲು ದೇವರು ಪ್ರಬಲ ಭಾಷೆಯನ್ನು ಬಳಸುತ್ತಾರೆ ಮತ್ತು ಅವರ ಸುತ್ತಲಿರುವ ಸಂಕಟಪಡುವ ಮತ್ತು ತುಳಿತಕ್ಕೊಳಗಾದ ಜನರೊಂದಿಗೆ ತದ್ವಿರುದ್ಧವಾಗಿದೆ ಮತ್ತು ಅದರ ಸಂಪರ್ಕ ಕಡಿತಗೊಂಡಿದೆ. ಆಮೋಸ 5:21–24 ರಲ್ಲಿ "ದ್ವೇಷಿಸುತ್ತಾನೆ", "ತಿರಸ್ಕರಿಸುತ್ತಾನೆ" ಮತ್ತು ಸಾಮಾನ್ಯವಾಗಿ ಅವರ ಆರಾಧನೆಯಿಂದ ಜಿಗುಪ್ಸೆಗೊಂಡಿದ್ದಾನೆ ಎಂದು ದೇವರು ಹೇಳುತ್ತಿರುವುದನ್ನು ನಾವು ಓದಿದ್ದೇವೆ. ಅವರ ಸಭೆ ಸಮೂಹಗಳು "ದುರ್ನಾತ" ಮತ್ತು ಅವರ ಕಾಣಿಕೆ ಹಾಗೂ ಸಂಗೀತ ನಿಷ್ಪ್ರಯೋಜನಕ್ಕಿಂತ ಕಡಿಮೆ ಎಂದು ವಜಾ ಮಾಡಲಾಗುತ್ತಿದೆ ಎಂದು ವರ್ಣಿಸಲಾಗಿದೆ.

ಮೀಕ 6 ರಲ್ಲಿ ಹೆಚ್ಚು ಉಬ್ಬಿಕೊಂಡಿರುವ ಸರಣಿಗಳನ್ನು, ಅಪಹಾಸ್ಯ ಮಾಡುವ ಸಲಹೆಗಳನ್ನು ಅವರು ಎಷ್ಟು ಸೂಕ್ತವಾಗಿ ದೇವರನ್ನು ಆರಾಧಿಸಬಹುದು ಎಂದು ನಾವು ನೋಡಿದ್ದೇವೆ. ಪ್ರವಾದಿಯು ಹಾಸ್ಯಾಸ್ಪದವಾಗಿ ಸರ್ವಾಂಗ ಹೋಮ ಸಮರ್ಪಣೆಯ ಸಲಹೆಯನ್ನು ನೀಡುತ್ತಾನೆ, ನಂತರ ಕಾಣಿಕೆಯನ್ನು "ಸಾವಿರಾರು ಟಗರುಗಳನ್ನೂ, ಲಕ್ಷೋಪಲಕ್ಷ ತೈಲಾ ಪ್ರವಾಹ" (ಮೀಕ 6:7) ಗಳಿಗೆ ಹೆಚ್ಚಿಸಿದನು, ಭಯಾನಕ ಆದರೆ ಗೊತ್ತಿಲ್ಲದಕ್ಕೆ ಹೋಗುವ ಮೊದಲು ದೇವರ ಪ್ರೀತಿ ಕ್ಷಮೆಯ ಒಲವನ್ನು ಪಡೆಯಲು ತನ್ನ ಚೊಚ್ಚಲ ಮಗುವನ್ನು ಬಲಿಕೊಡುವುದನ್ನು ಸೂಚಿಸುತ್ತದೆ.

ಆದರೂ, ಕೊನೆಯಲ್ಲಿ ನಿಜವಾಗಿಯೂ ಕರ್ತನಿಗೆ ಅವರಿಂದ ಏನೂ ಬೇಕಾಗಿತೆಂದರೆ "ನ್ಯಾಯವನ್ನು ಆಚರಿಸುವುದು, ಕರುಣೆಯಲ್ಲಿ ಆಸಕ್ತನಾಗಿರುವುದು, ನಿನ್ನ ದೇವರಿಗೆ ನಮ್ರವಾಗಿ ನಡೆದುಕೊಳ್ಳುವುದಾಗಿತ್ತು" (ಮೀಕ 6:8).

**ನಿಮ್ಮ ಸುತ್ತಲೂ ಅಗತ್ಯವಿರುವವರಿಗೆ ಸಹಾಯ ಮಾಡುವ ಬದಲು ಧಾರ್ಮಿಕ ಸ್ವರೂಪಗಳ ಮತ್ತು ಆಚರಣೆಗಳ ಬಗ್ಗೆ ಹೆಚ್ಚು ಕಾಳಜಿ ವಹಿಸುವ ಅಪರಾಧವನ್ನು ನೀವು ಎಂದಾದರೂ ಕಂಡುಕೊಂಡಿದ್ದೀರಾ? ಆ ಅನುಭವದಿಂದ ನೀವು ಏನು ಕಲಿತಿದ್ದೀರಿ?**

**ಬುಧವಾರ** **ಆಗಸ್ಟ್ 7**

# ಆರಾಧಿಸುವ ಒಂದು ಮಾರ್ಗ

ಆರಾಧನೆ ಮತ್ತು ನ್ಯಾಯದ ನಡುವಿನ ಸಂಬಂಧದ ಕುರಿತಾದ ಅವರ ವಿವರಣೆಯಲ್ಲಿ ಪ್ರವಾದಿಗಳು ಒತ್ತಾಯಿಸಿದ ಇನ್ನೊಂದು ಹೆಜ್ಜೆಯಿದೆ : ಬಡವರ ಮತ್ತು ತುಳಿತಕ್ಕೊಳಗಾದವರ ಹಾಗೂ ಅವಶ್ಯಕತೆಯಿರುವವರಿಗೆ ಸಹಾಯ ಮಾಡಿ ನಿವಾರಿಸುವುದಕ್ಕೆ ಸಕ್ರಿಯ ಕಾಳಜಿಯು ಸ್ವತಃ ಆರಾಧನೆಯ ಒಂದು ಭಾಗವಾಗಿದೆ. ಯೆಶಾಯ 58ನೇ ಅಧ್ಯಾಯದ ಈ ಕೊಂಡಿ (ಲಿಂಕ್) ಯನ್ನು ಸ್ಪಷ್ಟಪಡಿಸುತ್ತದೆ.

ಯೆಶಾಯ 58 ಓದಿ. ಈ ಅಧ್ಯಾಯದ ಮೊದಲಿನ ಭಾಗದಲ್ಲಿ ವಿವರಿಸಿದಂತೆ ದೇವರು ಮತ್ತು ಅವನ ಜನರ ನಡುವಿನ ಸಂಬಂಧದಲ್ಲಿ ಏನು ತಪ್ಪಾಗಿದೆ?

ನಾವು ಹಿಂದೆ ನೋಡಿದಂತೆ, ಈ ಟೀಕೆಯನ್ನು ಸಕ್ರಿಯವಾಗಿರುವ ಧಾರ್ಮಿಕ ಜನರಿಗೆ ತಿಳಿಸಲಾಗಿದೆ. ಅವರು ದೇವರನ್ನು ಶ್ರದ್ಧೆಯಿಂದ ಹುಡುಕುತ್ತಿದ್ದಾರೆಂದು ತೋರುತ್ತದೆ. ಆದರೆ ಇದು ಸ್ಪಷ್ಟವಾಗಿ ಕೆಲಸ ಮಾಡುವುದಿಲ್ಲ. ಆದ್ದರಿಂದ ಅವರು ಆರಾಧನೆ ಮಾಡುವ ರೀತಿಯನ್ನು ಬದಲಾಯಿಸಲು ಪ್ರಯತ್ನಿಸಬೇಕು, ದೇವರನ್ನು ಸೇವಿಸಲು ವಿಭಿನ್ನ ರೀತಿಯಾಗಿ ಪ್ರಯತ್ನಿಸಬೇಕು ಎಂದು ದೇವರು ಹೇಳುತ್ತಾನೆ. ಅವರು ಹೇಗೆ ಆರಾಧಿಸಬೇಕೆಂದು ಆತನು ಆರಿಸಿದರೆ, ಅದು "ಕೇಡಿನ ಬಂಧನಗಳನ್ನು ಬಿಚ್ಚುವುದು, ನೊಗದ ಕಣ್ಣಿಗಳನ್ನು ಕಳಚುವದು, ಬಜ್ಜಿ ಹೋದವರನ್ನು ಬಿಡುಗಡೆ ಮಾಡುವದು" (ಯೆಶಾಯ 58:16). ಅವರು ಹಸಿದವರಿಗೂ ಸಹ ಅನ್ನ ನೀಡುವರು, ಮನೆಯಿಲ್ಲದವರಿಗೆ ಆಶ್ರಯ ನೀಡುತ್ತಾರೆ ಮತ್ತು ನಿರ್ಗತಿಕರಿಗೆ ಸಹಾಯ ಮಾಡುತ್ತಾರೆ.

ಇಂತಹ ಚಟುವಟಿಕೆಗಳನ್ನು ಆರಾಧನೆಗೆ ಏಕೈಕ ವಿಧವಾಗಿ ಪ್ರಸ್ತುತ ಪಡಿಸಲಾಗಿಲ್ಲ, ಆದರೆ ದೇವರು ಆರಾಧನೆಗೆ ಒಂದು ಮಾರ್ಗವಾಗಿ ಅವರನ್ನು ಪ್ರಚೋದಿಸುತ್ತಾನೆ ಮತ್ತು ಕೆಲವು ಜನರ ಬಹಳ ಸಾಂಪ್ರದಾಯಿಕ ಆರಾಧನೆ ಪದ್ಧತಿಗಳಿಗೆ ಅದು ಯೋಗ್ಯವಾದ ಆರಾಧನೆಯ ರೂಪವಾಗಿದೆ. ಅಂತೆಯೇ ಆರಾಧನೆಯು ಕೇವಲ ಒಳಗಿನ ತೋರಿಕೆಗೆ ಮಾತ್ರ ಗಮನ ಹರಿಸುವುದಿಲ್ಲ.

ಆದರೆ ಅದು ದೇವರ ಆರಾಧಕರ ಸುತ್ತಲಿರುವ ಎಲ್ಲರಿಗೂ ಆಶೀರ್ವಾದವನ್ನು ತರುತ್ತದೆ. "ಪಾಪದ ಹೊರೆಗಳಿಂದ ಮನುಷ್ಯನನ್ನು ಬಿಡುಗಡೆಗೊಳಿಸುವುದೇ ಧರ್ಮದ ನಿಜವಾದ ಉದ್ದೇಶ, ಸೈರಿಸುವಿಕೆ ಮತ್ತು ದಬ್ಬಾಳಿಕೆಯನ್ನು ತೆಗೆದು ಹಾಕಲು ಮತ್ತು ನ್ಯಾಯ, ಸ್ವಾತಂತ್ರ್ಯ ಮತ್ತು ಶಾಂತಿಯನ್ನು ಉತ್ತೇಜಿಸುವುದು" – ಎಸ್.ಡಿ.ಎ ಬೈಬಲ್ ಕಾಮೆಂಟರಿ, ಸಂಪುಟ 4, ಪುಟ 306.

ಯೆಶಾಯ 58:8–12 ರಲ್ಲಿ, ಈ ಮಾದರಿಯ ಆರಾಧನೆಗೆ ಪ್ರತಿಕ್ರಿಯೆಯಾಗಿ ದೇವರು ಆಶೀರ್ವಾದಗಳ ವಾಗ್ದಾನವನ್ನು ಮಾಡುತ್ತಾನೆ. ಪರಿಣಾಮವಾಗಿ, ಜನರು ಸ್ವತಃ ತಮ್ಮ ಮೇಲೆ ಕಡಿಮೆ ಗಮನಹರಿಸುತ್ತಿದ್ದರೆ, ದೇವರು ಅವರೊಂದಿಗೆ ಕೆಲಸ ಮಾಡುತ್ತಿದ್ದಾನೆ ಎಂದು ಕಂಡುಕೊಳ್ಳಬಹುದು ಮತ್ತು ಅವರ ಮೂಲಕ ಸ್ವಸ್ಥತೆ ಮತ್ತು ಮರುಸ್ಥಾಪನೆಯನ್ನು ತರಬಹುದು ಎಂದು ದೇವರು ಹೇಳುತ್ತಿದ್ದಾರೆ.

ಕುತೂಹಲಕಾರಿಯಾಗಿ, ಈ ಅಧ್ಯಾಯವು ಆನಂದ ತುಂಬಿದ ಸಬ್ಬತ್ತನ್ನು ಆಚರಿಸುವ ನವೀಕರಣದೊಂದಿಗೆ ಈ ರೀತಿಯ ಆರಾಧನೆಯನ್ನು ಸಹ ಜೋಡಿಸುತ್ತದೆ. ಈಗಾಗಲೇ ನಾವು ಸಬ್ಬತ್ ಮತ್ತು ಸೇವೆಯ ನಡುವಿನ ಕೆಲವು ಬಲವಾದ ಸಂಪರ್ಕಗಳನ್ನು ಪರಿಗಣಿಸಿದ್ದೇವೆ, ಆದರೆ ಈ ವಚನಗಳು ಈ ಎರಡೂ ಚಟುವಟಿಕೆಗಳಾದ ಅವರ ಆರಾಧನೆಯನ್ನು ಪುನರುಜ್ಜೀವನಗೊಳಿಸಲು ಮತ್ತು ದೇವರ ಆಶೀರ್ವಾದವನ್ನು ಕಂಡುಕೊಳ್ಳಲು ಜನರಿಗಾಗಿ ಈ ಕರೆಯಲ್ಲಿ ಸೇರಿವೆ ಈ ವಚನಗಳ ಮೇಲೆ ಪ್ರತಿಬಿಂಬಿಸುತ್ತಿರುವ ಎಲೆನ್ ಜಿ ವೈಟಮ್ಮನವರ "ಯೆಹೋವನು ಸಬ್ಬತ್ತನ್ನು ಕೈಕೊಂಡು ನಡೆಯುವವರ ಮೇಲೆ ಕರುಣೆ ಮತ್ತು ಕೃತಜ್ಞತೆಯ ಕೆಲಸ ಮಾಡುತ್ತಿರುವ ಜವಾಬ್ದಾರಿಯನ್ನು ಇಡಲಾಗಿದೆ" – ವೆಲ್‌ಫೇರ್ ಮಿನಿಸ್ಟ್ರಿ, ಪುಟ 121.

**ಗುರುವಾರ** **ಆಗಸ್ಟ್ 8**

## ಕರುಣೆ ಮತ್ತು ನಿಷ್ಠೆ

ಯೇಸು ತನ್ನ ದಿನದಲ್ಲಿದ್ದ ಕೆಲವು ಧಾರ್ಮಿಕ ಮುಖಂಡರನ್ನು ಮುಖಾಮುಖಿಯಾದಾಗ ಆತನು "ಪಾಪಿ"ಗಳೊಂದಿಗೆ ಊಟ ಮಾಡುವುದನ್ನು ಅವರು ಟೀಕಿಸಿದರು. ಆತನು ಪ್ರವಾದಿಯಾದ ಹೋಶೆಯನ ಪುಸ್ತಕವನ್ನು

ಉಲ್ಲೇಖಿಸಿ, "ನನಗೆ ಯಜ್ಞವು ಬೇಡ, ಕರುಣೆಯೇ ಬೇಕು" (ಮತ್ತಾಯ 9:13, ಹೋಶೆಯ 6:6ರನ್ನು ಉಲ್ಲೇಖಿಸಲಾಗಿದೆ) ಎಂದು ಹೇಳಿದಾಗ, ತಮ್ಮ ಪುಸ್ತಕಗಳಿಗೆ ಹಿಂತಿರುಗಲು ಮತ್ತು ದೇವರು ನಿಜವಾಗಿಯೂ ಹೇಳಿದ ಅರ್ಥವನ್ನು ಕಂಡುಕೊಳ್ಳಲು ಅವರಿಗೆ ಹೇಳಿದನು.

ನಾವು ನೋಡುವಂತೆ, ಯೇಸುವು ಕಾಳಜಿ ಮತ್ತು ಸೇವೆಯ ಜೀವನವನ್ನು ಬದುಕಿದನು. ಇತರರೊಂದಿಗೆ ಆತನ ಪರಸ್ಪರ ಬೆರೆಯುವಿಕೆಯು, ಆತನ ಗುಣಪಡಿಸುವ ಅದ್ಭುತಗಳು, ಮತ್ತು ಆತನ ಅನೇಕ ಸಾಮ್ಯಗಳು ಪ್ರದರ್ಶಿಸಿದವು ಮತ್ತು ಅಂತಹ ರೀತಿಯಲ್ಲಿ ಜೀವನವನ್ನು ಬದುಕುವುದು ದೇವರಿಗೆ ನಿಜವಾದ ಭಕ್ತಿಯನ್ನು ವ್ಯಕ್ತಪಡಿಸುವ ಅತ್ಯುತ್ತಮ ಮಾರ್ಗ ಎಂದು ಆಗ್ರಹಿಸಿದವು. ಧಾರ್ಮಿಕ ನಾಯಕರೇ ಆತನ ದೊಡ್ಡ ವಿಮರ್ಶೆಯಾಗಿದ್ದರು, ಆದರೆ ಆತನ ಕಟುಟೀಕೆಗೂ ಸಹ ಗುರಿಯಾದರು. ಯೆಶಾಯನ ದಿನದ ಧಾರ್ಮಿಕ ಜನರಂತೆ ಅವರ ಧಾರ್ಮಿಕ ಪದ್ಧತಿಗಳ ಕಾರಣದಿಂದ ದೇವರೊಂದಿಗೆ ತಮ್ಮ ವಿಶೇಷ ಸಂಬಂಧವನ್ನು ಖಾತರಿ ಪಡಿಸಿಕೊಳ್ಳುತ್ತಿದ್ದಾರೆಂದು ನಂಬಿದ್ದರು. ಅದೇ ಸಮಯದಲ್ಲಿ ಅವರು ಬಡವರನ್ನು ಶೋಷಣೆ ಮಾಡುತ್ತಿದ್ದರು ಮತ್ತು ನಿಗರ್ತಿಕರನ್ನು ಅಸಡ್ಡೆ ಮಾಡುತ್ತಿದ್ದರು. ಅವರ ಆರಾಧನೆಯು ಅವರ ಕ್ರಿಯೆಗಳಿಗೆ ದೂರವಾಗಿತ್ತು ಮತ್ತು ಯೇಸು ಅಂತಹ ಬೂಟಾಟಿಕೆತನವನ್ನು ಆತನ ಖಂಡನೆಯಲ್ಲಿ ಮೀಸಲಿಡಲಿಲ್ಲ.

**ಮಾರ್ಕ 12:38–40 ಓದಿ. ಅವರು "ವಿಧವೆಯರ ಮನೆಗಳನ್ನು ನುಂಗಿ ಹಾಕುವರು" ಎಂಬ ಯೇಸುವಿನ ಹೇಳಿಕೆಯು ಈ ಪಟ್ಟಿಯಲ್ಲಿ ಸ್ಥಾನ ಪಡೆದಿಲ್ಲವೆಂದು ತೊರುತ್ತದೆ, ಅಥವಾ ಆ ಅಂಶವನ್ನೇ ಮಾಡಲು ಯೇಸು ಪ್ರಯತ್ನಿಸುತ್ತಿದ್ದಾರೆಯೇ? "ಇವರು ಹೆಚ್ಚಾದ ದಂಡನೆಯನ್ನು ಹೊಂದುವರು" ಯಾಕೆ ಎಂದು ನೀವು ಹೇಗೆ ವಿವರಿಸುತ್ತೀರಿ?**

ಬಹುಶಃ ಯೇಸುವಿನ ಅತ್ಯಂತ ಭಯಾನಕ ಪ್ರಸಂಗವು ನಿರ್ದಿಷ್ಟವಾಗಿ ಧಾರ್ಮಿಕ ಜನರಿಗಾಗಿರುವುದು ಮತ್ತಾಯ 23ನೇ ಅಧ್ಯಾಯದಲ್ಲಿ ಕಂಡು ಬರುತ್ತದೆ. ಜೀವನದಲ್ಲಿ ಅಸೌಕರ್ಯ ಇರುವ ಜನರಿಗೆ ಅವರ ಧರ್ಮ

ನೆರವಾಗುತ್ತಿಲ್ಲವೆಂದು ಮಾತ್ರ ಯೇಸು ವಿವರಿಸಿಲ್ಲ, ಅವನು ಅಂತಹ ಧರ್ಮವನ್ನು ಅವರ ಭಾಗಗಳಿಗೆ ಸೇರಿಸಿಕೊಳ್ಳುವಂತೆ ಪರಿಗಣಿಸಿದನು. ಅವರ ಕ್ರಿಯೆಗಳಿಂದ ಅಥವಾ ಅವರ ಕ್ರಿಯೆ ಮತ್ತು ಕಾಳಜಿಯ ಕೊರತೆಯ ಸಮಯದಲ್ಲಿ, ಅವರಿಗೆ "ಪರಲೋಕ ರಾಜ್ಯದ ಬಾಗಿಲನ್ನು ಮನುಷ್ಯರ ಎದುರಿಗೆ ಮುಚ್ಚಿ ಬಿಡುತ್ತಾರೆ" ಎಂದು ಯೇಸು ಹೇಳಿದರು (ಮತ್ತಾಯ 23:13).

ಆದರೆ ಶತಮಾನಗಳ ಹಿಂದಿನ ಪ್ರವಾದಿಗಳ ಮಾತುಗಳನ್ನು ಪ್ರತಿಧ್ವನಿಸುತ್ತಾ, ಯೇಸು ಸಹ ಅವರ ಗಂಭೀರ ಧಾರ್ಮಿಕ ಆಚರಣೆಗಳು ಮತ್ತು ಅನ್ಯಾಯಗಳ ಮತ್ತು ಲಾಭದ ನಡುವಿನ ಅಂತರವನ್ನು ಅವರು ಮನ್ನಿಸಿದರು ಎಂದು ನೇರವಾಗಿ ಸಂಬೋಧಿಸಿದರು ಮತ್ತು "ಅಯ್ಯೋ ಕಪಟಿಗಳಾದ ಶಾಸ್ತ್ರಿಗಳೇ, ಪರಿಸಾಯರೇ, ನೀವು ಮರುಗ ಸೋಪು ಜೀರಿಗೆಗಳಲ್ಲಿ ಹತ್ತರಲ್ಲೊಂದು ಪಾಲು ಕೊಡುತ್ತೀರಿ ಸರಿ, ಆದರೆ ಧರ್ಮಶಾಸ್ತ್ರದಲ್ಲಿ ಗೌರವಾದದ್ದನ್ನು ಅಂದರೆ ನ್ಯಾಯವನ್ನೂ ಕರುಣೆಯನ್ನೂ ನಂಬಿಕೆಯನ್ನೂ ಬಿಟ್ಟುಬಿಟ್ಟಿರಿ" (ಮತ್ತಾಯ 2:3, 23). ಧಾರ್ಮಿಕ ಪದ್ಧತಿಗಳು ಮತ್ತು ಆಚರಣೆಗಳು ಸ್ವತಃ ಅವರಲ್ಲಿ ತಪ್ಪಾಗಿಲ್ಲ ಎಂದು ಯೇಸು ಬೇಗನೆ ಸೇರಿಸಿದರು. ಆದರೆ ಇತರರನ್ನು ಚೆನ್ನಾಗಿ ಉಪಚರಿಸುವ ಸ್ಥಾನವನ್ನು ಅವರು ತೆಗೆದುಕೊಳ್ಳಲೇ ಇಲ್ಲ.

ಸತ್ಯವನ್ನು ಪಡೆಯುವ ಮತ್ತು ತಿಳಿದುಕೊಳ್ಳುವದು ಸಾಕು ಎಂದು ಯೋಚಿಸುವ ಬಲೆಗೆ ಸಿಕ್ಕಿ ಹಾಕಿಕೊಳ್ಳದಂತೆ ನಾವು ಹೇಗೆ ತಪ್ಪಿಸಬಹುದು?

**ಶುಕ್ರವಾರ** **ಆಗಸ್ಟ್ 9**

**ಮುಂದಿನ ಆಲೋಚನೆ :** ಎಲೆನ್ ಜಿ ವೈಟ್‌ರವರ ವೆಲ್‌ಫೇರ್ ಮಿನಿಸ್ಟ್ರಿಯಲ್ಲಿ "ಯೆಶಾಯ 58–ಎ ಡಿವೈನ್ ಪ್ರಿಸ್ಕ್ರಿಪಶನ್" ಪುಟಗಳು 29–34, ದಿ ಡಿಸೈರ್ ಆಫ್ ಏಜಸ್‌ನಲ್ಲಿ "ಪೋಸ್ ಆನ್ ಫರಸೀಸಸ್" ಪುಟಗಳು 610–620 ಓದಿ.

"ಪ್ರಾಯೋಗಿಕ ದೈವತ್ವದ ಮೌಲ್ಯವನ್ನು ಒತ್ತಾಯಿಸುವಲ್ಲಿ, ಶತಮಾನಗಳ ಹಿಂದೆ ಇಸ್ರಾಯೇಲ್ಯರಿಗೆ ನೀಡಿದ ಸಲಹೆಯನ್ನು ಮಾತ್ರ ಪ್ರವಾದಿಯು ಪುನರಾವರ್ತಿಸುತ್ತಿದ್ದನು.. ಕಾಲದಿಂದ ಕಾಲಕ್ಕೆ ಈ ಸಲಹೆಗಳನ್ನು ಔಪಚಾರಿಕತೆಯ ಹವ್ಯಾಸಗಳೊಳಗೆ ಬೀಳುವ ಅಪಾಯದಲ್ಲಿದ್ದವರಿಗೆ ಯೆಹೋವನ ಸೇವಕರು

ಪುನರಾವರ್ತನೆ ಮಾಡಿದರು ಮತ್ತು ಕರುಣೆ ತೋರುವುದಕ್ಕೆ ಮರೆತುಹೋದರು" – ಎಲೆನ್ ಇ ವೈಟ್, ಪ್ರಾಫೆಟ್ಸ್ ಆಂಡ್ ಕಿಂಗ್ಸ್, ಪುಟಗಳು 326, 327.

ಯೆಶಾಯನ ಪ್ರವಾದನೆ ಗ್ರಂಥದ ಐವತ್ತೆಂಟನೇ ಅಧ್ಯಾಯಕ್ಕೆ ನಮ್ಮ ಜನರನ್ನು ಗಮನ ಸೆಳೆಯುಲು ನನಗೆ ಆದೇಶಿಸಲಾಗಿದೆ. ಈ ಅಧ್ಯಾಯುವನ್ನು ಜಾಗರೂಕತೆಯಿಂದ ಓದಿಕೊಳ್ಳಿ. ನಾವು ನಿಷ್ಪಕ್ಷಪಾತದಿಂದ ಹಾಗೆಯೇ ನಮ್ಮ ಶ್ರಮದಿಂದ ಸುವಾರ್ತೆಯ ಕೆಲಸವನ್ನು ತೆಗೆದುಕೊಂಡು ಹೋಗಬೇಕು. ಸಹಾಯದ ಅಗತ್ಯವಿರುವ ಬಳಲುವ ಆತ್ಮಗಳನ್ನು ನೀವು ಭೇಟಿ ಮಾಡಿದಾಗ, ಅದನ್ನು ಅವರಿಗೆ ನೀಡಿ. ಹಸಿದವರನ್ನು ನೀವು ಕಂಡುಕೊಂಡಾಗ, ಅವರಿಗೆ ಆಹಾರ ನೀಡಿ, ಇದನ್ನು ಮಾಡುವಾಗ ನೀವು ಕ್ರಿಸ್ತನ ಸೇವೆಯ ಸಾಲುಗಳಲ್ಲಿ ಕೆಲಸ ಮಾಡಿದಂತಾಗುತ್ತದೆ. ಗುರುವಿನ ಕೆಲಸವು ಹಿತಕರವಾದ ಕೆಲಸವಾಗಿತ್ತು. ಎಲ್ಲೆಡೆಯಲ್ಲಿರುವ ನಮ್ಮ ಜನರನ್ನು ಅದರಲ್ಲಿ ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸಲಿ" – ಎಲೆನ್ ಜಿ ವೈಟ್, ವೆಲ್‌ಫೇರ್ ಮಿನಿಸ್ಟ್ರಿ, ಪುಟ 29.

## ಚರ್ಚಿಸಬೇಕಾದ ಪ್ರಶ್ನೆಗಳು

1. ನ್ಯಾಯವನ್ನು ಆಚರಿಸುವದು ಮತ್ತು ಕರುಣೆಯಲ್ಲಿ ಆಸಕ್ತನಾಗಿರುವದು ಆರಾಧನೆಯ ಕೃತ್ಯವೆಂದು ಎಂದಾದರೂ ನೀವು ಯೋಚಿಸಿದ್ದೀರಾ? ಇತರರಿಗೆ ಆರೈಕೆ ಮಾಡುವುದರಲ್ಲಿ ನಿಮ್ಮ ವಿಧಾನವನ್ನು ಹೇಗೆ ಬದಲಿಸಬಹುದು? ಇದು ನಿಮ್ಮ ಆರಾಧನೆಯ ವಿಧಾನವನ್ನು ಹೇಗೆ ಬದಲಾಯಿಸಬಹುದು?

2. ನಮ್ಮ ಕ್ರೈಸ್ತೀಯ ಜೀವನದಲ್ಲಿ, "ಧರ್ಮಶಾಸ್ತ್ರದ ಬಹಳ ಪ್ರಾಮುಖ್ಯವಾದ ಅಂಶಗಳನ್ನು (ಮತ್ತಾಯ 23:23) ಪ್ರತ್ಯೇಕವಾಗಿ ಮತ್ತು ಸಭಾ ಸಮುದಾಯುವಾಗಿ ನಿರ್ಲಕ್ಷಿಸುವುದರ ವಿರುದ್ಧ ನಾವು ಹೇಗೆ ಕಾಪಾಡಬಹುದು? ನಿಮ್ಮ ಸ್ವಂತ ಅನುಭವದಲ್ಲಿ "ಸೊಳ್ಳೆ ಸೋಸುವವರು, ಒಂಟೇ ನುಂಗುವವರು" (ಮತ್ತಾಯ 23:24) ಎಂಬ ಕೆಲವು ಉದಾಹರಣೆಗಳನ್ನು ನೀವು ಎಲ್ಲಿಯಾದರೂ ಗುರುತಿಸಬಲ್ಲಿರಾ?

3. ಬೂಟಾಟಿಕೆ ಅಂತಹ ಪಾಪವೆಂದು ಏಕೆ ಪರಿಗಣಿಸಲಾಗಿದೆ? ನಾವು ಒಳ್ಳೆಯದನ್ನು ಮಾಡುತ್ತಿರುವಂತೆ ಕಾಣಿಸಿಕೊಳ್ಳಲು ಪ್ರಯತ್ನಿಸಬಹುದೇ?

**ಸಾರಾಂಶ :** ಪ್ರವಾದಿಗಳು ಭೂಮಿಯಲ್ಲಿ ದುಷ್ಟತನದ ಬಗ್ಗೆ ಕಾಳಜಿಯನ್ನು ಹೊಂದಿದ್ದರೂ ಅವರು ನಿರ್ದಿಷ್ಟವಾಗಿ ದೇವರನ್ನು ತಮ್ಮ ಸ್ವಂತದಂತೆ ಆರಾಧಿಸುವ ಜನರೆಂದು ಹಕ್ಕು ಸಾಧಿಸುವವರಾಗಿ ಮಾಡಿದ ದುಷ್ಟತನದ ಮೇಲೆ ಗಮನವನ್ನು ಕೇಂದ್ರೀಕರಿಸಿದ್ದರು. ಪ್ರವಾದಿಗಳಿಗಾಗಿ ಮತ್ತು ಯೇಸುವಿಗಾಗಿ, ಆರಾಧನೆಯು ಅನ್ಯಾಯದೊಂದಿಗೆ ಅಸಮಂಜಸವಾಗಿದೆ, ಅಂತಹ ಧರ್ಮವು ಬೂಟಾಟಿಕೆಯಾಗಿದೆ. ದೇವರನ್ನು ಹುಡುಕುವ ನೈಜ ಆರಾಧನೆಯು ದಬ್ಬಾಳಿಕೆಯ ವಿರುದ್ಧವಾಗಿ ಕೆಲಸ ಮಾಡುವುದು ಮತ್ತು ಬಡವರ ಹಾಗೂ ನಿರ್ಗತಿಕರಿಗೆ ಕಾಳಜಿ ವಹಿಸುವುದನ್ನು ಒಳಗೊಂಡಿದೆ.